ಓ.ಎಸ್.ನಂ.446/2017

ಡಿ.ಡಬ್ಲ್ಯೂ:1

**ದಿನಾಂಕಃ21.02.2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲುಃವಾದಿ ಪರ ಶ್ರೀ.ಟಿ.ಜಿ.ಎಸ್. ವಕೀಲರಿಂದಃ**

ವಾದಿ ಲಕ್ಕಮ್ಮ ರವರು ನನಗೆ ಗೊತ್ತು ಅಂದರೆ ಸರಿ. ಲಕ್ಕಮ್ಮ ರವರು ಹುಟ್ಟಿದಾಗಿನಿಂದಲೂ ಚಿಕ್ಕಬಾಸೂರು ಗ್ರಾಮದಲ್ಲಿ ವಾಸವಾಗಿದ್ದಾರೆ ಅಂದರೆ ಸರಿ. ಲಕ್ಕಮ್ಮ ಮತ್ತು ಅವರ ಕುಟುಂಬದವರು ವ್ಯವಸಾಯ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ ಅಂದರೆ ಸರಿ. ದಾವಾ ಆಸ್ತಿಯಲ್ಲಿ ವಾದಿಯು ಖರೀದಿ ಮಾಡಿದಾಗಿನಿಂದ ಸ್ವಾಧೀನಾನುಭವದಲ್ಲಿದ್ದಾರೆ ಅಂದರೆ ಸರಿ. ದಾವಾ ಆಸ್ತಿಯನ್ನು ವಾದಿಯು ಯಾವಾಗ ಖರೀದಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಿಃ28.05.1987 ರಲ್ಲಿ ದಾವಾ ಆಸ್ತಿಯನ್ನು ವಾದಿಯು ಸಿದ್ಧಪ್ಪ ಬಿನ್ ಸಣ್ಣ ನೀಲಪ್ಪ ಅವರಿಂದ ಶುದ್ಧ ಕ್ರಯಕ್ಕೆ ಖರೀದಿ ಮಾಡಿದ್ದಾರೆ ಅಂದರೆ ಸರಿ. ದಾವಾ ಆಸ್ತಿಯನ್ನು ವಾದಿಯು ಖರೀದಿಸುವ ಮುನ್ನ ಸದರಿ ಸಿದ್ಧಪ್ಪರವರು ಸ್ವಾಧೀನಾನುಭವದಲ್ಲಿದ್ದರು ಅಂದರೆ ಸರಿ. ಸದರಿ ಸಿದ್ಧಪ್ಪರವರಿಂದ ದಾವಾ ಆಸ್ತಿಯನ್ನು ವಾದಿಯು ಖರೀದಿ ಮಾಡಿದ ನಂತರ ವಾದಿ ಮತ್ತು ಅವರ ಮಕ್ಕಳು ದಾವಾ ಆಸ್ತಿಯ ಸ್ವಾಧೀನಾನುಭವದಲ್ಲಿದ್ದಾರೆ ಅಂದರೆ ಸರಿ.

ಡಿ.ಡಬ್ಲ್ಯು:1

ದಾವಾ ಆಸ್ತಿಯ ಪೂರ್ವಕ್ಕೆ: ಪೂಜಾರಿ ಮಲ್ಲಯ್ಯ ರವರ ಆಸ್ತಿ ಇತ್ತು ಅಂದರೆ ಸರಿ, ಸದರಿ ಮಲ್ಲಯ್ಯ ರವರ ಆಸ್ತಿಯನ್ನು ಈಗ ನಾವು ಖರೀದಿ ಮಾಡಿ ಸ್ವಾಧೀನಾನುಭವದಲ್ಲಿದ್ದೇವೆ ಅಂದರೆ ಸರಿ. ದಾವಾ ಆಸ್ತಿಯ ಉತ್ತರಕ್ಕೆ: ವಾದಿಗೆ ಸೇರಿದ ಮತ್ತೊಂದು ಜಮೀನು ಇದೆ ಅಂದರೆ ಸರಿ, ದಾವಾ ಆಸ್ತಿಯ ಪಶ್ಚಿಮಕ್ಕೆ:ಲಕ್ಕಪ್ಪರವರ ಜಮೀನು ಮತ್ತು ದಕ್ಷಿಣಕ್ಕೆ: ಮೈಲಾರಪ್ಪರವರ ಜಮೀನು ಇದೆ ಅಂದರೆ ಸರಿ.

ವಾದಿಯು ದಾವಾ ಆಸ್ತಿಯನ್ನು ಖರೀದಿ ಮಾಡಿದ ನಂತರ ದಾವಾ ಆಸ್ತಿಗೆ ಸುತ್ತಲೂ ಬದು ನಿರ್ಮಾಣ ಮಾಡಿಕೊಂಡಿದ್ದಾರೆ ಅಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಯ ಸುತ್ತ ಬದು ನಿರ್ಮಾಣ ಮಾಡಿಕೊಂಡಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಯನ್ನು ಖರೀದಿ ಮಾಡಿದ ನಂತರ ದಾವಾ ಆಸ್ತಿಯ ಪೂರ್ವ ದಿಕ್ಕಿಗಿರುವ ಪೂಜಾರಿ ಮಲ್ಲಯ್ಯ ರವರ ಜಮೀನನ್ನು ನಾನು ಖರೀದಿ ಮಾಡಿರುತ್ತೇನೆ. ನಾನು ಖರೀದಿ ಮಾಡಿರುವ ಜಮೀನಿನಲ್ಲಿ ಪಶ್ಚಿಮ ಭಾಗದ ಕಡೆಗೆ ತೆಂಗಿನ ಮರಗಳನ್ನು ಬೆಳೆಸಿದ್ದೇನೆ ಮತ್ತು ಪೂರ್ವ ಭಾಗದಲ್ಲಿ ಅರ್ಧ ಆಸ್ತಿ ಖಾಲಿ ಜಮೀನು ಬಿಟ್ಟುಕೊಂಡಿದ್ದೇನೆ. ನಾನು ನನ್ನ ಜಮೀನಿನಲ್ಲಿ ಬದುಗಳನ್ನು ನಿರ್ಮಾಣ ಮಾಡಿಕೊಂಡಿಲ್ಲ ಅಂದರೆ ಸರಿಯಲ್ಲ.

ವಾದಿಯು ಈ ದಾವೆ ದಾಖಲಿಸುವ ಪೂರ್ವದಲ್ಲಿ ವಾದಿಯ ವಿರುದ್ಧ ನಾನು ಯಾವುದೇ ದಾವೆಯನ್ನು ದಾಖಲೆ ಮಾಡಿರುವುದಿಲ್ಲ. ನನ್ನ ಆಸ್ತಿಯನ್ನು ಅಳತೆ ಮಾಡಿಸುವ ಸಂಬಂಧ ಭೂ ಮಾಪನ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿಕೊಂಡಿರುತ್ತೇನೆ, ಆ ಬಗ್ಗೆ ಭೂ ಮಾಪನ ಇಲಾಖೆಯಿಂದ ದಾಖಲಾತಿಗಳನ್ನು ಪಡೆದಿರುತ್ತೇನೆ. ಸದರಿ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ನಾನು ನನ್ನ ಜಮೀನನ್ನು ಅಳತೆ ಮಾಡಿಸಿಲ್ಲ ಮತ್ತು ಆ ಬಗ್ಗೆ ಯಾವುದೇ ದಾಖಲೆಗಳು ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ವಾದಿಯು ತಾನು ಖರೀದಿಸಿದ 1 ಎಕರೆ 30 ಗುಂಟೆ ಜಮೀನಿನಲ್ಲಿ ಮಾತ್ರ ಸ್ವಾಧೀನಾನಭವದಲ್ಲಿದ್ದಾರೆ ಅಂದರೆ ಸಾಕ್ಷಿಯು ವಾದಿಯ ಜಮೀನು ಎರಡು ಪ್ಲಾಟುಗಳಲ್ಲಿ ಅಂದರೆ 1 ಎಕರೆ 8 ಗುಂಟೆ ಒಂದು ಕಡೆ ಮತ್ತು 20 ಗುಂಟೆ, ಮತ್ತೊಂದು ಕಡೆ ವಾದಿಗೆ ಸೇರಿದ ಜಮೀನು ಇದೆ ಎಂದು ನುಡಿಯುತ್ತಾರೆ. ವಾದಿಗೆ

ಸೇರಿದ 1 ಎಕರೆ 30 ಗುಂಟೆ ಜಮೀನು ಒಂದೇ ಪ್ಲಾಟಿನಲ್ಲಿದೆ ಅಂದರೆ ಸರಿಯಲ್ಲ. ವಾದಿಗೆ ಸೇರಿದ 20 ಗುಂಟೆ ಲಪಟಾಯಿಸುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ವಾದಿಗೆ ಸೇರಿದ ಜಮೀನಿನ ಒಳಗೆ ನನಗೆ ಸೇರಿದ 20 ಗುಂಟೆ ಜಮೀನು ಸೇರಿದೆ ಎಂದು ಪದೇ ಪದೇ ವಾದಿಯ ದಾವಾ ಆಸ್ತಿಯ ಶಾಂತಿಯುತ ಸ್ವಾಧೀನಾನುಭವಕ್ಕೆ ಅಡ್ಡಿಪಡಿಸಿರುತ್ತೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಸೇರಿದ 20 ಗುಂಟೆ ಜಮೀನು ಇದೆ ಪೋಲೀಸರ ಪ್ರಭಾಗ ಬೀರಿ ಸುಳ್ಳು ದೂರು ದಾಖಲು ಮಾಡಿದ್ದೇನೆ ಅಂದರೆ ಸರಿಯಲ್ಲ, ಆದರೆ ಪೋಲೀಸರಿಗೆ ದೂರು ನೀಡಿರುತ್ತೇನೆ.

ವಾದಿಯು ದಾವಾ ಆಸ್ತಿಯನ್ನು ಖಾಸಗಿ ಭೂ ಮಾಪಕರಿಂದ ಅಳತೆ ಮಾಡಿಸಿದಾಗ ದಾವಾ ಆಸ್ತಿಯು 1 ಎಕರೆ 30 ಗುಂಟೆ ಇರುವುದಾಗಿ ತಿಳಿದುಬಂದಿರುತ್ತದೆ ಅಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.